ಶ್ರೀ ಡಿ. ಟಿ. ಮಾಯಣ್ಣ.—ಮಾಡಿಸಿಕೊಡುತ್ತೇನೆಂದು ಹೇಳಿ. ಪರಿಶೀಲನೆಯಲ್ಲಿದೆ ಎಂದರೆ ಹೇಗೆ ?

ಶ್ರೀ ಬೇಗಾನೆ ರಾಮಯ್ಯ.—ಆದ್ಯತೆ ಕೊಡುತ್ತೇವೆಂದು ಹೇಳಿದ್ದೇನಲ್ಲ.

Boranakanve Dam in Chikkanayakanahalli Taluk

203 SRI T.B. JAYACHANDRA (Kallambella).—Will the Minister for Transport and Minor Irrigation be pleased to state.—

(a) whether it has come to the notice of the Government that Boranakanve Dam in Chikkanayakanahally Taluk, Tumkur District is supplied with insufficient water due to construction of tanks for the valies which feeds Boranakanve Dam

(b) will the Government examine the request of feeding water to B.K. Dam through Hemavathi water which will be supplied to Tipur Taluk in future;

(c) if the level permits whether the Government will take action to take up the project early?

SRI M.M.J. SADYOJATHA (Minister for Transport and Minor Irrigation).—

(a) No.

(b) Does not arise in view of reply at (a).

(c) Does not arise.

ಶ್ರೀ ಟಿ.ಬಿ. ಜಯಚಂದ್ರ.—ನನ್ನ ಎಲ್ಲ ಪ್ರಶ್ನೆಗಳಿಗೂ 'ಇಲ್ಲ, ಇಲ್ಲ' ಎಂದು ಉತ್ತರಿಸಿದ್ದೀರಿ. ಇದು ನನಗೆ ಅರ್ಥವಾಗುತ್ತಿಲ್ಲ. ನನಗೆ ಉತ್ತರ ಬೇಕಾಗಿರುವುದು ಸಣ್ಣ ನೀರಾವರಿ ಅಥವಾ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಿಂದ ಅಥವಾ ಮಾನ್ಯ ಮುಖ್ಯ ಮಂತ್ರಿಗಳಿಂದ ಅವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಸಣ್ಣ ನೀರಾವರಿ ಮಂತ್ರಿಗಳು ಅನಾರೋಗ್ಯದ ನಿಮಿತ್ತ ತೋಟಗಾರಿಕೆ ಮಂತ್ರಿಗಳಿಗೆ ಉತ್ತರ ನೀಡಲು ಪಹಿಸಿದ್ದಾರೆ. ಆಪರಿಗೆ ಪ್ರೈಲು ಬಂದಿರುತ್ತದೆ, ಆವರು ಉತ್ತರ ನೀಡುತ್ತಾರೆ. ಈಗ ನೀವು ಪ್ರಶ್ನೆ ಕೇಳಿ. ಒಂದು ವೇಳೆ ಉತ್ತರ ಸಮಂಜಸವಾಗದಿದ್ದರೆ ಮುಂದೆ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ.—ಕಳೆದ ಹತ್ತಾರು ವರ್ಷಗಳಿಂದ ಬೋರನಕಣಿವೆಯಲ್ಲಿ ನೀರಿಲ್ಲದೆ ಸಮಸ್ಯೆ ಉಂಟಾಗಿದೆ. ಹಿಂದೆ ಯಾವಾಗಲೂ ತುಂಬಿರುತ್ತಿತ್ತು, ಮತ್ತು ವರ್ಷಕ್ಕೆ ೩ ಬೆಳೆಯಾಗುತ್ತಿತ್ತು ಈಗ ಒಂದೇ ಬೆಳೆ ಕೂಡ ಆಗುವುದಿಲ್ಲ, ಒಂದು ಬೆಳೆ ಮಾತ್ರ ಆಗುತ್ತಿದೆ. ಏಕೆಂದರೆ ಅದರ ಮೇಲ್ಗಡೆ ಸಾಕಷ್ಟು ಕೆರೆಗಳು ಬಂದಿವೆ. ಆದ್ದರಿಂದ, ಆ ಅಣೆಕಟ್ಟಿಗೆ ಹೇಮಾವತಿ ಜಲಾಶಯದಿಂದ ನೀರನ್ನು ಒದಗಿಸಲು ಸಾಧ್ಯವೆ? ಎಂದು ಕೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ (ತೋಟಗಾರಿಕೆ ಮಂತ್ರಿಗಳು (ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ).—ಹೇಮಾವತಿ ನೀರನ್ನು ಬಿ.ಕೆ. ಡ್ಯಾಮಿಗೆ ತರಲಿಕ್ಕೆ ಸಾಧ್ಯವೆ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ ಬಿ.ಕೆ. ಡ್ಯಾಮಿಗೆ ಇರತಕ್ಕ ವ್ಯಾಲಿ ಕೃಷ್ಣ, ಹೇಮಾವತಿಗೆ ಕಾವೇರಿ. ಈ ರೀತಿ ಇರುವಾಗ ಅಲ್ಲಿಂದ ನೀರನ್ನು ಕೊಡುವುದು ಕಷ್ಟ. ಆದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದ ಕ್ಕೋಸ್ಕರವೇ (ಆ) ಮತ್ತು (ಇ) ಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿರುವುದು. ಕೃಷ್ಣ ಬೇಸನ್ನಿಗೆ ಕಾವೇರಿ ಬೇಸನ್ನಿನಿಂದ ನೀರು ತರುವುದು ಕಷ್ಟ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ನೀರಂ ತೆಗೆದುಕೊಂಡು ಹೋಗಬಾರದು ಎಂದು ಯಾವ ಕಾನೂನಿನಲ್ಲಿದೆ?

ಅಧ್ಯಕ್ಷರು —ಹಾಗಾದರೆ ಅನಾಹುತ ಚಾಸ್ತಿಯಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ.—ಕಾವೇರಿ ಬೇಸಿನ್‌ನಿಂದ ಕೃಷ್ಣಾ ಬೇಸಿನ್‌ಗೆ ನೀರು ತರಂವುದಕ್ಕಾಗು ವುದಿಲ್ಲ ಎಂದು ಹೇಳುತ್ತಿದ್ದಾರೆ. ಯಾವ ಕಾರಣದಿಂದ ಸಾಧ್ಯವಿಲ್ಲ ಎಂದು ಹೇಳಿ. ಬೇಸಿನ್ ಎಂದು ವರ್ಗ ಮಾಡಿದಾಕ್ಷಣ ನೀರು ತರುವುದಕ್ಕಾಗುವುದಿಲ್ಲವೆ? ದಯವಿಟ್ಟು ಕಾರಣ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಯೆಂಕಟಪ್ಪ.—ಅಧ್ಯಕ್ಷರೇ, ಕಾವೇರಿ ಬೇಸಿನ್ ಬೇರೆ, ಕೃಷ್ಣಾ ಬೇಸಿನ್ ಬೇರೆ. ಕೃಷ್ಣ ಬೇಸಿನ್ ಮಾಡಬೇಕಾದರೆ ಕೆಲವು ನಿಯಮಾವಳಿ ಇದೆ. ಉದಾಹರಣೆಗೆ ಹೇಮಾವತಿ ನೀರನ್ನು ಟನೆಲ್ ಮುಖಾಂತರ ತಂದರೆ ಕುಣಿಗಲ್‌ವರೆಗೂ ಒರುತ್ತದೆ. ಅಂದರೆ ೨೪೦ ಕಿಲೋಮೀಟರ್‌ವರೆಗೂ ನೀರು ಬರಬೇಕಾಗುತ್ತದೆ. ವೇಸ್ಟ್ ವಾಟರ್ ಪುನಃ ಹೇಮಾವತಿ ವ್ಯಾಲಿಗೆ ಬರುತ್ತದೆ. ಅಂದರೆ ಕಾವೇರಿ ವ್ಯಾಲಿಗೆ ಬರುತ್ತದೆ. ಇದರಲ್ಲಿ ಕೃಷ್ಣ ಬೇಸಿನ್‌ಗೆ ಹೋಗದಿರುವುದಕ್ಕೆ ಆಲ್ಲಿರತಕ್ಕ ಗುಡ್ಡಗಾಡುಗಳೇ ಕಾರಣ. ಅಲ್ಲಿ ಗುಡ್ಡಗಳನ್ನು ಸೀಳಿ ನೀರು ತರುವುದಕ್ಕೆ ಆರ್ಥಿಕವಾಗಿ ಅಷ್ಟು ಸರಿಹೋಗುವುದಿಲ್ಲ. ಮಾನ್ಯ ಸದಸ್ಯರ ಕಳಕಳಿ ಇರುವುದರಿಂದ ಇಲಾಖೆಯಿಂದ ಪರಿಶೀಲಿಸಿ ಸದಸ್ಯರಿಗೆ ತಿಳಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ.—ಬೆಟ್ಟ ಸೀಳಿ ನೀರು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ಮಾತನ್ನು ಹೇಳಬೇಕಾದರೆ ಅದನ್ನು ಪರೀಕ್ಷೆ ಮಾಡಿಸಿದ್ದೀರಾ?

ಅಧ್ಯಕ್ಷರು.—ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ನೀರು ಕೊಡುವ ವ್ಯವಸ್ಥೆ ಸದ್ಯಕ್ಕಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ.—ಬೆಟ್ಟ ಸೀಳಿ ತರುವುದಕ್ಕೆ ಸಾಧ್ಯವೇ, ಇಲ್ಲವೇ ಎಂಬ ಬಗ್ಗೆ ಪರಿಶೀಲನೆ ಮಾಡಿಸಿದ್ದೀರಾ?

ಶ್ರೀ ಕೆ. ಯೆಂಕಟಪ್ಪ.—ಏಗ್ಸಾಮಿನ್ ಎಂದು ಹೇಳಿದರೆ ಪ್ರಿಲಿಮಿನರಿ ನಕಾಶೆಯಲ್ಲಿ ಇರುತ್ತದೆ. ಕ್ಯಾಚ್‌ಮೆಂಟ್ ಏರಿಯಾ ಆಥವಾ ಕಾಂಟ್ಯುರ ಲೈನ್ ಪರಿಶೀಲನೆ ಮಾಡಿ ನೋಡಿದಾಗ ಹಾಗೆ ಕಾಣುತ್ತದೆ.

ಶ್ರೀ ಟಿ.ಬಿ. ಜಯಚಂದ್ರ.—ಮಾನ್ಯ ಮಂತ್ರಿಗಳ ಉತ್ತರ ಸತ್ಯಕ್ಕೆ ದೂರವಾದುದು. ಯಾವ ಬೆಟ್ಟದ ತೊದರೆಯೂ ಆಗುವುದಿಲ್ಲ. ಸುಲಭವಾಗಿ ನೀರು ತರಬಹುದು. ಹಣ ಖರ್ಚಿಲ್ಲದೆ ನೀರು ತರುವುದಕ್ಕೆ ಅವಕಾಶವಿದೆ. ತಿಪಟೂರು ತಾಲ್ಲೂಕು ಮೂಲಕ ಕುಣಿಗಲ್‌ಗೆ ನೀರು ಹೋಗುವುದರಿಂದ ಸುಲಭವಾಗಿ ನೀರನ್ನು ಕೊಡುವುದಕ್ಕೆ ಅವಕಾಶವಿದೆ. ಇವತ್ತು ಅಲ್ಲಿ ದೊಡ್ಡ ಅಣೆಕಟ್ಟನ್ನು ಕಟ್ಟಿದರೂ ನೀರು ಸಿಗದೇ ಬೆಳೆ ಇಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಯಾವುದೇ ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ಕೊಡಬಾರದು ಎಂದು ಕಾನೂನು ಇಟ್ಟುಕೊಂಡು ನೀರನ್ನು ಕೊಡದೇ ಹೋದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಸಮಗ್ರವಾಗಿ ಪರೀಕ್ಷೆ ಮಾಡಿಸಿ ಆಮೇಲೆ ಬೇಕಾದರೆ ಮಂತ್ರಿಗಳು ಉತ್ತರ ಹೇಳಲಿ. ಸುಮ್ಮನೆ ಹೇಳತಕ್ಕ ಉತ್ತರ ಇದಲ್ಲ.

ಶ್ರೀ ಕೆ. ಯೆಂಕಟಪ್ಪ.—ಅಧ್ಯಕ್ಷರೇ, ಈಗ ಕೃಷ್ಣಾ ಬೇಸಿನ್ ಮತ್ತು ಕಾವೇರಿ ಬೇಸಿನ್ ವಿವಾದ ಗಳಿರುವುದರಿಂದ ನೀರು ಇಂಥಿಂಥ ವ್ಯಾಲಿಗೆ ಇಷ್ಟಿಷ್ಟೇ ಎಂದು ವ್ಯವಸ್ಥೆ ಇದೆ. ಈಗ ಮಾನ್ಯ ಸದಸ್ಯರು ಹೇಳುವಂತೆ ನೀರು ಬಿಡುಗಡೆ ಬಗ್ಗೆ ಪರೀಕ್ಷೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರ ನಿರೀಕ್ಷಣೆಗೆ ತಕ್ಕಂತೆ ಉತ್ತರವನ್ನು ತಕ್ಷಣದಲ್ಲಿ ಹೇಳಿದರೆ ಅದು ಅಷ್ಟು ಸರಿಕಾಣುವುದಿಲ್ಲ. ಆದ್ದರಿಂದ ಪರೀಕ್ಷೆ ಮಾಡಿಸಿ ಹೇಳುವವರೆಗೆ ಕಾಲ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ.—ಎಷ್ಟು ದಿವಸದಲ್ಲಿ ಮಾಡುತ್ತೀರಿ? ಏತಕ್ಕೆಂದರೆ ಪ್ರಶ್ನೆ ಹಾಕಿ ಎರಡು ವರ್ಷ ಆಯಿತು. ನಾವು ಇರುವುದು ಇನ್ನು ಒಂದೂವರೆ ವರುಷ.

ಶ್ರೀ ಕೆ. ಯೆಂಕಟಪ್ಪ.—ಸಾಧ್ಯವಾದಷ್ಟು ಜಾಗ್ರತೆ ತಿಳಿಸಲಾಗುತ್ತದೆ.